# ಯಾಜ್ಞವಲ್ಕ್ಯನ ವಿಜಯ

## (ಬೃಹದಾರಣ್ಯಕೋಪನಿಷತ್ತು - ೩)

ಸ್ವಾಮಿ ವೀರೇಶಾನಂದ

**ಯಾ**ಜ್ಞವಲ್ಕ್ಯನು ಹಲವಾರು ವಿದ್ವಾಂಸರ ಜೊತೆಗೆ ವಾದವನ್ನು ಮಾಡುತ್ತಿದ್ದಾನೆ. ಉದ್ದಾಲಕ ಆರುಣಿಯು ಅವನ ಜೊತೆಗೆ ವಾದ ಮಾಡಿ ಹಿಂಜರಿದನು. ಈಗಾಗಲೇ ಗಾರ್ಗಿಯೆಂಬ ಬ್ರಹ್ಮವಾದಿನಿಯು ಯಾಜ್ಞವಲ್ಕ್ಯನಿಗೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿದಿದ್ದಾಳೆ. ಅವನಿಂದ ಸಮಂಜಸವಾದ ಉತ್ತರಗಳನ್ನು ಪಡೆದುಕೊಂಡಿದ್ದಾಳೆ. ಈಗ ಅವಳು ಮತ್ತೆ ಎದ್ದು ನಿಂತಳು.

ಉದ್ದಾಲಕನ ಪ್ರಶ್ನೆಗೆ ಉತ್ತರವಾಗಿ ಯಾಜ್ಞವಲ್ಕ್ಯನು ಸೂತ್ರದ ಬಗ್ಗೆ ವಿವರಿಸಿದ್ದನು. ಆಗ ಅವನು ಹೇಳಿದ್ದು ಇಷ್ಟು : ಆಕಾಶದಂತೆ ಸೂಕ್ಷ್ಮವಾಗಿ ಪೃಥಿವೀ ಮುಂತಾದ ಎಲ್ಲ ಲೋಕಗಳನ್ನೂ ಎತ್ತಿಹಿಡಿದಿರುವ ತತ್ತ್ವವೊಂದಿದೆ. ಇದು ಪ್ರಾಣಿಗಳ ಕರ್ಮಕ್ಕೂ ಆಶ್ರಯವಾಗಿರುವ ತತ್ತ್ವ. ಇದು ಸಮಷ್ಟಿಯಲ್ಲೂ ವ್ಯಷ್ಟಿಯಲ್ಲೂ ಓತಪ್ರೋತವಾಗಿರುತ್ತದೆ. ಇದು ಶಾಂತ ಸಮುದ್ರದಂತೆ ಇರುತ್ತದೆ. ಜಗತ್ತಿನ ಎಲ್ಲ ಪದಾರ್ಥಗಳೂ ಅದರ ಅಲೆಗಳಂತೆ ಇರುತ್ತದೆ. ಇದಕ್ಕೆ ಸೂತ್ರವೆಂಬ ಹೆಸರು ಬಂದಿದ್ದು ಏಕೆ ಗೊತ್ತೆ? ಈ ಲೋಕವೂ, ಪರಲೋಕವೂ ಸರ್ವಭೂತಗಳೂ ಇದರಿಂದಲೇ ಪೋಣಿಸಲ್ಪಟ್ಟು, ಅವುಗಳ ಸ್ಥಾನದಲ್ಲಿ ಗಟ್ಟಿಯಾಗಿ ನಿಂತಿರುತ್ತವೆ. ಹೀಗಾಗಿ ಇದಕ್ಕೆ ಸೂತ್ರ ಎಂದು ಕರೆಯುತ್ತಾರೆ. ಈ ಹಿನ್ನೆಲೆಯಲ್ಲಿ ನಾವು ಗಾರ್ಗಿಯು ಈಗ ಕೇಳುವ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಬೇಕು.

ಗಾರ್ಗಿಯು ಎದ್ದುನಿಂತು ಬ್ರಹ್ಮಜ್ಞರ ಸಭೆಗೆ ಗೌರವದಿಂದ ನಮಿಸಿದಳು. ''ಗೌರವಾನ್ವಿತರಾದ ವಿದ್ವಾಂಸರೇ, ಈ ಸಭೆಯಲ್ಲಿ ಮತ್ತೆ ನಿಂತು ಯಾಜ್ಞವಲ್ಕ್ಯನನ್ನು ಪ್ರಶ್ನಿಸುವುದಕ್ಕೆ ತಾವು ದಯವಿಟ್ಟು ಅನುಮತಿಯನ್ನು ಕೊಡಬೇಕು. ತಾವು ಒಪ್ಪಿಗೆಯನ್ನು ನೀಡುವುದಾದರೆ ನಾನು ಎರಡು ಪ್ರಶ್ನೆಗಳನ್ನು ಅವನಿಗೆ ಕೇಳುವೆನು. ಅವುಗಳಿಗೆ ಯಾಜ್ಞವಲ್ಕ್ಯನು ಉತ್ತರವನ್ನು ನೀಡುವುದಾದರೆ, ನಿಮ್ಮಲ್ಲಿ ಯಾರೂ ಕೂಡ ಬ್ರಹ್ಮವಾದದಲ್ಲಿ ಇವನನ್ನು ಜಯಿಸುವುದಕ್ಕೆ ಸಾಧ್ಯವೇ ಇಲ್ಲ.''

ಇದಕ್ಕೆ ಸಭೆಯಲ್ಲಿ ನೆರೆದಿದ್ದ ವಿದ್ವಾಂಸರೆಲ್ಲರೂ ಅನುಮತಿಯನ್ನು ನೀಡಿದರು. ''ಗಾರ್ಗಿಯೇ, ಖಂಡಿತವಾಗಿ ಪ್ರಶ್ನೆಗಳನ್ನು ಕೇಳು'' ಎಂದು ಹೇಳಿದರು.

ಅನಂತರ ಗಾರ್ಗಿಯು ಯಾಜ್ಞವಲ್ಕ್ಯನನ್ನು ಕುರಿತು ಹೇಳಿದಳು. ''ಯಾಜ್ಞವಲ್ಕ್ಯನೇ , ನಿನಗೆ ನಾನು ಎರಡು ಪ್ರಶ್ನೆಗಳನ್ನು ಕೇಳುವೆನು. ಕಾಶೀನಗರದಲ್ಲಿ ಅಥವಾ ವಿದೇಹ ರಾಜ್ಯದಲ್ಲಿ ಒಬ್ಬ ವೀರನು ಇದ್ದಾನೆ ಎಂದಿಟ್ಟುಕೋ. ಅವನು ಶತ್ರುಗಳನ್ನು ಹಿಂಸಿಸಲು ಧನುಸ್ಸನ್ನು ತಯಾರಾಗಿ ಇಟ್ಟುಕೊಂಡಿದ್ದಾನೆ. ಬಿಲ್ಲಿಗೆ ಹೆದೆಯನ್ನು ಏರಿಸಿಕೊಂಡಿದ್ದಾನೆ. ಹರಿತಮಾಡಿಕೊಂಡಿರುವ ಎರಡು ಬಾಣಗಳನ್ನು ಕೈಯಲ್ಲಿ ಇಟ್ಟುಕೊಂಡು ಎದುರಿಗೆ ನಿಂತಿದ್ದಾನೆ. ಹೀಗೆ ಕಲ್ಪಿಸಿಕೋ. ಅವನ ಎರಡು ಬಾಣಗಳಂತೆಯೇ ನನ್ನ ಈ ಎರಡು ಪ್ರಶ್ನೆಗಳು. ಆ ವೀರನಂತೆಯೇ ನಾನು ಬಹು ಕಷ್ಟವಾದ ಎರಡು ಸವಾಲುಗಳನ್ನು ನಿನಗೆ ಹಾಕಲು ಎದುರಿಗೆ ನಿಂತಿದ್ದೇನೆ. ಅವುಗಳಿಗೆ ಸರಿಯಾಗಿ ಉತ್ತರವನ್ನು ನೀನು ಹೇಳಲೇಬೇಕು.''

**ಯಾಜ್ಞವಲ್ಕ್ಯ:** ''ಗಾರ್ಗಿ, ನಿನ್ನ ಪ್ರಶ್ನೆಗಳನ್ನು ಧಾರಾಳವಾಗಿ ಕೇಳು.''

ಯಾಜ್ಞವಲ್ಕ್ಯನಿಂದ ಅನುಜ್ಞೆಯನ್ನು ಪಡೆದ ಗಾರ್ಗಿಯು ಮೊದಲನೆಯ ಪ್ರಶ್ನೆಯನ್ನು ಕೇಳುತ್ತಾಳೆ: ''ಈ ಹಿಂದೆ ನೀನು ಸೂತ್ರದ ಬಗ್ಗೆ ಉಪದೇಶ ಮಾಡಿದ್ದೀಯೆ. ಅದು ಎಲ್ಲಕ್ಕಿಂತ ಮೇಲಿರುವ ದ್ಯುಲೋಕದ (ಸ್ವರ್ಗಲೋಕ) ಮೇಲೆಯೂ ಹರಡಿದೆ. ಎಲ್ಲಕ್ಕಿಂತ ಕೆಳಗಿರುವ ಭೂಮಿಯ ಕೆಳಗೂ ಹರಡಿದೆ. ಇದಲ್ಲದೆ ಸ್ವರ್ಗಲೋಕ ಮತ್ತು ಭೂಮಿಯ ನಡುವಿನ ಅಂತರಿಕ್ಷದಲ್ಲಿಯೂ ಹಬ್ಬಿಕೊಂಡಿದೆ. ಇದಕ್ಕೆ ಕಾಲದ ಗಣನೆಯಿಲ್ಲ. ಭೂತ, ವರ್ತಮಾನ ಮತ್ತು ಭವಿಷ್ಯತ್ತುಗಳಲ್ಲೆಲ್ಲ ಸಮಾನವಾಗಿ ಇದೆ. ಇಂಥ ಸೂತ್ರಕ್ಕೂ ಕಾರಣವಾದುದು ಯಾವುದು, ನಿನಗೆ ಗೊತ್ತೇನು? ಈ ಸೂತ್ರವು ಯಾವುದರಲ್ಲಿ ಅಂತರ್ಭೂತವಾಗಿದೆ? ಯಾವುದರಲ್ಲಿ ಓತಪ್ರೋತವಾಗಿದೆ?''

**ಯಾಜ್ಞವಲ್ಕ್ಯನು ಉತ್ತರಿಸಿದನು:** ''ಗಾರ್ಗಿ, ಯಾವುದು ಸ್ವರ್ಗಲೋಕಕ್ಕೂ ಆಚೆ ಹರಡಿದೆಯೋ, ಯಾವುದು ಭೂಮಿಯ ಕೆಳಗೂ ಹಬ್ಬಿದೆಯೋ, ಇದಲ್ಲದೆ ಯಾವುದು ದ್ಯಾವಾಪೃಥಿವಿಗಳ ನಡುವೆ ಕೂಡ ವಿಸ್ತರಿಸಿದೆಯೋ, ಯಾವುದನ್ನು ಭೂತಕಾಲ, ವರ್ತಮಾನ ಕಾಲ ಮತ್ತು ಭವಿಷ್ಯತ್ ಕಾಲ ಎನ್ನುವರೋ ಅಂಥ ಸೂತ್ರವೆಂಬ ತತ್ತ್ವವು ಆಕಾಶದಲ್ಲಿ (ಅವ್ಯಕ್ತ) ಓತಪ್ರೋತವಾಗಿದೆ. ಈ ಅವ್ಯಕ್ತವೇ ಸೂತ್ರದ ಆಕರವಾಗಿದೆ. ಇದು ಅವ್ಯಕ್ತದಲ್ಲಿಯೇ ಹೆಣೆದುಕೊಂಡಿರುತ್ತದೆ.

**ಗಾರ್ಗಿಯು ಹೇಳಿದಳು:** ''ಯಾಜ್ಞವಲ್ಕ್ಯನೇ, ನೀನು ನನ್ನ ಮೊದಲನೆಯ ಪ್ರಶ್ನೆಗೆ ಸರಿಯಾದ ಉತ್ತರವನ್ನು ನೀಡಿದ್ದೀಯೆ. ನಿನಗೆ ನಮಸ್ಕಾರ. ಈಗ ನಾನು ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಇದಕ್ಕಾಗಿ ನಿನ್ನ ಮನಸ್ಸನ್ನು ದೃಢವಾಗಿ ಇಟ್ಟುಕೋ.''

ಶೇಷವೆಂದರೆ ತಾನು ಹಿಂದೆ ಕೇಳಿದ ಪ್ರಶ್ನೆಯನ್ನೇ ಗಾರ್ಗಿ ಮತ್ತೆ ಕೇಳುತ್ತಿದ್ದಾಳೆ. ತನ್ನ ಎರಡನೆಯ ಪ್ರಶ್ನೆಗೆ ಪೂರ್ವಭಾವಿಯಾಗಿ ಹಳೆಯ ಪ್ರಶ್ನೆಯನ್ನೇ ಅವಳು ಪುನರುಚ್ಚರಿಸುತ್ತಿದ್ದಾಳೆ ಎನ್ನಬಹುದು. ಯಾಜ್ಞವಲ್ಕ್ಯನೂ ಅದೇ ಉತ್ತರವನ್ನು ನೀಡುತ್ತಾನೆ: ''ಗಾರ್ಗಿ, ಯಾವುದು ಸ್ವರ್ಗಲೋಕಕ್ಕಿಂತ ಆಚೆಯಿರುವುದೋ, ಪೃಥಿವಿಗಿಂತಲೂ ಕೆಳಕ್ಕೆ ಹಬ್ಬಿರುವುದೋ, ಅವೆರಡರ ಮಧ್ಯದಲ್ಲೂ ಹಬ್ಬಿರುವುದೋ, ಸೂತ್ರವೆಂಬ ಆ ತತ್ತ್ವವು ಆಕಾಶದಲ್ಲಿ ಓತಪ್ರೋತವಾಗಿದೆ. ಆಕಾಶವೆಂದರೆ ಅವ್ಯಕ್ತ ಎಂದರ್ಥ. ಈ ಅವ್ಯಕ್ತವೇ ಸೂತ್ರದ ಮೂಲವಾಗಿದೆ, ಕಾರಣವಾಗಿದೆ.''

**ಇನ್ನು ಗಾರ್ಗಿಯು ತನ್ನ ಪ್ರಶ್ನೆಯನ್ನು ಮುಂದುವರೆಸುತ್ತಾಳೆ:** ''ಹಾಗಾದರೆ ಆಕಾಶ ಎಂಬ ಹೆಸರಿನ ಅವ್ಯಕ್ತವು ಯಾವುದರಲ್ಲಿ ಓತಪ್ರೋತ ಓತಪ್ರೋತವಾಗಿರುತ್ತದೆ? ಈ ಅವ್ಯಕ್ತದ ಮೂಲ ಅದಾವುದು?''

ಇದಕ್ಕೆ ಯಾಜ್ಞವಲ್ಕ್ಯನು ಸೊಗಸಾದ ಉತ್ತರವನ್ನು ನೀಡುತ್ತಾನೆ: ''ಅವ್ಯಕ್ತಕ್ಕೂ ಮೂಲವಾದ, ಕಾರಣವಾದ ಪರತತ್ತ್ವವನ್ನೇ ಅಕ್ಷರ ಎಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಇದು ಸ್ಥೂಲ ಪದಾರ್ಥಗಳಿಗಿಂತ ಭಿನ್ನವಾದುದು — ಅಸ್ಥೂಲ. ಹಾಗೆಂದು ಸೂಕ್ಷ್ಮಪದಾರ್ಥವೇನಲ್ಲ. ಸೂಕ್ಷ್ಮಕ್ಕಿಂತಲೂ ಭಿನ್ನವಾದುದು – ಅನಣು. ಇಷ್ಟೇ ಅಲ್ಲ, ಅಕ್ಷರವು ಹ್ರಸ್ವವೂ ಅಲ್ಲ, ದೀರ್ಘವೂ ಅಲ್ಲ. ಈ ನಾಲ್ಕು ಗುಣಗಳನ್ನು ನಿರಾಕರಿಸಿದ್ದರಿಂದ, ಅಕ್ಷರವು ದ್ರವ್ಯವಸ್ತುವಲ್ಲ ಎಂದ ಹಾಗಾಯಿತು.

''ಇದೇ ರೀತಿ, ಅಕ್ಷರವು ಅಗ್ನಿಯ ಹಾಗೆ ಕೆಂಪು ಬಣ್ಣವೂ ಅಲ್ಲ, ನೀರಿನಂತೆ ತೇವವಾಗಿ ಅಂಟಿಕೊಳ್ಳುವುದು ಕೂಡ ಇಲ್ಲ. ಹಾಗೆಯೇ ಇದು ನೆರಳು ಕೂಡ ಅಲ್ಲ, ಏಕೆಂದರೆ ಅದು ಯಾವುದನ್ನೂ ಎತ್ತಿತೋರಿಸುವುದಿಲ್ಲ. ಹಾಗಾದರೆ ಇದು ಕತ್ತಲೆಯೇ ಎಂದರೆ ಇದು ಕತ್ತಲೆ ಕೂಡ ಅಲ್ಲ. ಹಾಗೆಂದು ಅದು ವಾಯುವು ಕೂಡ ಅಲ್ಲ. ಹಾಗೆಯೇ ಇದು ಆಕಾಶ ಕೂಡ ಅಲ್ಲ. ಈ ಅಕ್ಷರಕ್ಕೆ ಯಾವ ಸಂಗವೂ ಕೂಡ ಇಲ್ಲ. ಇದು ನಿತ್ಯ ಅಸಂಗವು. ಇದು ರಸವೂ ಅಲ್ಲ; ಗಂಧವೂ ಅಲ್ಲ; ಅದು ಚಕ್ಷುರಿಂದ್ರಿಯವೂ ಅಲ್ಲ. ಇದು ಶ್ರೋತ್ರೇಂದ್ರಿಯವೂ ಅಲ್ಲ. ಇದು ವಾಕ್ ಕೂಡ ಅಲ್ಲ. ತೇಜಸ್ಸು ಕೂಡ ಅಲ್ಲ. ಪ್ರಾಣವು ಕೂಡ ಅಲ್ಲ. ಇದಕ್ಕೆ ಮುಖವೂ ಇಲ್ಲ, ಇದನ್ನು ಅಳೆಯಲಾಗುವುದಿಲ್ಲ. ಇದರಲ್ಲಿ ಯಾವ ಛಿದ್ರವೂ ಇಲ್ಲ; ಇದರಲ್ಲಿ ಅಂತರವೂ ಇಲ್ಲ; ಬಾಹ್ಯವೂ ಇಲ್ಲ. ಇದು ಯಾವುದನ್ನೂ ಭುಂಜಿಸುವುದಿಲ್ಲ. ಇದನ್ನು ಯಾರು ಕೂಡ ಭುಂಜಿಸುವುದಿಲ್ಲ. ಒಟ್ಟಾರೆ ಅಕ್ಷರಕ್ಕೆ ಯಾವ ವಿಶೇಷಣ ಕೂಡ ಇಲ್ಲ. ಇದು ಸರ್ವವಿಶೇಷಣರಹಿತವಾದುದು. ಏಕಮೇವ ಅದ್ವಿತೀಯನಾದ ಇದಕ್ಕೆ ವಿಶೇಷಣವಾಗಲು ಬೇರೆ ಇರುವುದಾದರೂ ಏನು?''

ಯಾಜ್ಞವಲ್ಕ್ಯನು ಈ ಅಕ್ಷರನ ಇರುವಿಕೆಗೆ ಅನೇಕ ಪುರಾವೆಗಳನ್ನು ನಮ್ಮ ಮುಂದೆ ಇಡುತ್ತಾನೆ: ''ಗಾರ್ಗಿ, ಈ ಅಕ್ಷರದ ಪ್ರಶಾಸನದಲ್ಲಿಯೇ ಸೂರ್ಯಚಂದ್ರರು ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಸ್ವರ್ಗಲೋಕ ಮತ್ತು ಪೃಥಿವಿಗಳು ತಮ್ಮ ತಮ್ಮ ಸ್ಥಾನದಲ್ಲಿ ಸ್ಥಿರವಾಗಿ ಇರುತ್ತವೆ. ಕಾಲಗಣನೆಯ ವಿವಿಧ ಮಾನಗಳಾದ ನಿಮಿಷಗಳು, ದಿನರಾತ್ರಿಗಳು, ಪಕ್ಷಗಳು (ಶುಕ್ಲಪಕ್ಷ ಮತ್ತು ಕೃಷ್ಣಪಕ್ಷ), ಹನ್ನೆರಡು ಮಾಸಗಳು, ಆರು ಋತುಗಳು, ಸಂವತ್ಸರಗಳು (ವರ್ಷ) – ಇವೆಲ್ಲವೂ ಸಮಂಜಸವಾಗಿ ಇರುವುದು ಈ ಪರಮಾತ್ಮನ ಅಧಿಪತ್ಯದಲ್ಲಿಯೇ. ಗಾರ್ಗಿ, ಇಷ್ಟು ಮಾತ್ರವಲ್ಲ, ಈ ಅಕ್ಷರದ ಆಡಳಿತಕ್ಕೆ ಒಳಪಟ್ಟೇ ಹಿಮಾಲಯದ ಶ್ವೇತ ಹಿಮಚ್ಛಾದಿತ ಪರ್ವತಗಳಿಂದ ಕೆಲವು ನದಿಗಳು ಪೂರ್ವದಿಕ್ಕಿಗೆ ಹರಿದು ಸಮುದ್ರವನ್ನು ಸೇರುತ್ತವೆ. ಇನ್ನು ಕೆಲವು ನದಿಗಳು ಪಶ್ಚಿಮ ದಿಕ್ಕಿನಲ್ಲಿ ಹರಿದು ಪಶ್ಚಿಮಸಮುದ್ರವನ್ನು ಸೇರುತ್ತವೆ. ಇನ್ನೂ ಕೆಲವು ತಮಗೆ ಗೊತ್ತುಮಾಡಿಕೊಟ್ಟ ದಿಕ್ಕುಗಳಲ್ಲಿ ಹರಿಯುತ್ತವೆ. ಇದಲ್ಲದೆ, ಗಾರ್ಗಿ, ದಾನ ಮಾಡುವವರು ಪುಣ್ಯವನ್ನು ಪಡೆಯುತ್ತಾರೆ; ಅಂಥ ಪುಣ್ಯಕಾರ್ಯಕ್ಕೆ ಫಲವನ್ನು ಕೊಡುವವನು ಒಬ್ಬನು ಇರಬೇಕು; ಅವನೇ ಈಶ್ವರ ಎಂದು ಜನರಿಗೆ ಗೊತ್ತಿದೆ. ಹಾಗೆಂದೇ ದಾನಮಾಡುವವರನ್ನು ಜನರು ಹೊಗಳುತ್ತಾರೆ. ದೇವತೆಗಳು ಶಕ್ತಿವಂತರು; ಆದರೂ ಯಜಮಾನನು (ಯಜ್ಞಮಾಡುವವನು) ಯಜ್ಞದಲ್ಲಿ ಕೊಡುವ ಆಹುತಿಗೆ ಮರುಳಾಗಿ ಅವನ ದಾಸರಾಗಿಬಿಡುತ್ತಾರೆ. ಹಾಗೆಯೇ ಪಿತೃದೇವತೆಗಳು ಕೂಡ. ಶ್ರಾದ್ಧಕರ್ಮದಲ್ಲಿ ಅವರಿಗೆ ಸಿಗುವ ಆಹುತಿಗಾಗಿ ಯಜಮಾನನ ಮೇಲೆಯೇ ಅವರು ಅವಲಂಬಿತರಾಗಿರುತ್ತಾರೆ. ಈ ವ್ಯವಸ್ಥೆಯನ್ನು ಉಂಟು ಮಾಡಿದವನು ಯಾರು? ಅಕ್ಷರನೆಂಬ ಪರಮಾತ್ಮನೇ.''

ಹೀಗೆ ಹಲವಾರು ದೃಷ್ಟಾಂತಗಳ ಮೂಲಕ ಯಾಜ್ಞವಲ್ಕ್ಯನು ಅಕ್ಷರನೆಂಬ ಹೆಸರಿನ ಪರಮಾತ್ಮನ ಅಸ್ತಿತ್ವವನ್ನು ಅನುಮಾನದ ಪ್ರಕಾರ ಸಾಧಿಸಿತೋರಿಸುತ್ತಾನೆ. ಅನಂತರ ಇಡೀ ಮಾನವತೆಗೆ ಒಂದು ಎಚ್ಚರಿಕೆಯನ್ನು ನೀಡುತ್ತಾನೆ:

''ಓ ಗಾರ್ಗಿ, ಯಾವನು ಈ ಅಕ್ಷರವನ್ನು ಅರಿತುಕೊಳ್ಳದೆಯೇ ಈ ಜಗತ್ತಿನಲ್ಲಿ ಕೇವಲ ಯಜ್ಞಯಾಗಾದಿಗಳನ್ನು ಮಾತ್ರವೇ ಬಹಳ ವರ್ಷಕಾಲ ಮುಂದುವರೆಸಿಕೊಂಡು ಹೋಗುವನೋ, ಆತ್ಮಜ್ಞಾನವಿಲ್ಲದೆ ಬರಿ ತಪಸ್ಸನ್ನು ಮಾಡುವನೋ, ಅವನ ಕರ್ಮಕ್ಕೆ ಕೊನೆಯಿದ್ದೇ ಇರುತ್ತದೆ. ಅಂದರೆ ಅವನ ಕರ್ಮದ ಫಲವು ಅನಿತ್ಯವಾದುದು. ಅವನಿಗೆ ಸಿಗುವ ಸ್ವರ್ಗಲೋಕವಾಗಲಿ, ಬ್ರಹ್ಮಲೋಕವಾಗಲಿ ಅನಿತ್ಯವಾದುದು. ಹೀಗಾಗಿ ಅವನ ಕರ್ಮವು ಅಂತ್ಯವುಳ್ಳದ್ದು, ಅಸ್ಥಿರವಾದುದು. ಗಾರ್ಗಿ, ಈ ಅಕ್ಷರವನ್ನು ಅರಿತುಕೊಳ್ಳದೆ ಯಾರು ಈ ಲೋಕವನ್ನು ತ್ಯಜಿಸುವನೋ, ಅವನು ನಿಜವಾಗಲೂ ದೀನನು, ದಾಸವೃತ್ತಿಗೆ ಯೋಗ್ಯನು. ಇದಕ್ಕೆ ಪ್ರತಿಯಾಗಿ, ಯಾವನು ಈ ಅಕ್ಷರವನ್ನು ಅರಿತುಕೊಂಡು, ದೇಹತ್ಯಾಗದ ಮೂಲಕ ಈ ಲೋಕದಿಂದ

ತೆರಳುವನೋ ಅವನು ನಿಜವಾದ ಬ್ರಾಹ್ಮಣನು. ಅವನೇ ನಿಜವಾದ ಬ್ರಹ್ಮಜ್ಞಾನಿಯು.

ತನ್ನ ಉಪದೇಶವನ್ನು ಮುಂದುವರೆಸುತ್ತಾ, ಯಾವುದು ಇಡೀ ಲೋಕದ ಅಧಿಪತ್ಯವನ್ನು ಹೊಂದಿರುವನೋ ಆ ಅಕ್ಷರ ಪರಮಾತ್ಮನು ಪ್ರತಿಯೊಬ್ಬ ಜೀವನ ಅಂತರಾತ್ಮನೇ ಆಗಿದ್ದಾನೆ ಎಂದು ಯಾಜ್ಞವಲ್ಕ್ಯನು ಬೋಧಿಸುತ್ತಾನೆ. ''ಈ ಅಕ್ಷರವನ್ನು ನೋಡುವುದಕ್ಕೆ ಆಗುವುದಿಲ್ಲ. ಆದರೆ ಅದು ಎಲ್ಲವನ್ನೂ ನೋಡುವ ಸಾಕ್ಷಿಚೈತನ್ಯವಾಗಿದೆ. ಇದಕ್ಕಿಂತ ಬೇರೆಯಾದ ದ್ರಷ್ಟ ಬೇರೆ ಯಾವುದೂ ಇಲ್ಲ. ಅದೇ ರೀತಿ, ಈ ಅಕ್ಷರವನ್ನು ಬಿಟ್ಟರೆ, ಬೇರೆ ಕೇಳುವವನಿಲ್ಲ, ಚಿಂತನೆ ಮಾಡುವವನಿಲ್ಲ, ತಿಳಿದುಕೊಳ್ಳುವವನಿಲ್ಲ. ಇದರರ್ಥ, ಈ ಎಲ್ಲ ಇಂದ್ರಿಯ ಚಟುವಟಿಕೆಗಳ ಹಿಂದಿರುವ, ಅದಕ್ಕೆಲ್ಲ ಆಧಾರವಾಗಿರುವ ಚೈತನ್ಯಸ್ವರೂಪವೇ ಅಕ್ಷರವಾಗಿದೆ. ಗಾರ್ಗಿ, ನೀನು ಕೇಳಿದೆಯಲ್ಲ! ಆಕಾಶವು (ಅವ್ಯಕ್ತ) ಯಾವುದರಲ್ಲಿ ಓತಪ್ರೋತವಾಗಿದೆ ಎಂದು. ಅದಕ್ಕೆ ಉತ್ತರವನ್ನು ನಾನು ಈಗ ಹೇಳುತ್ತೇನೆ. ನಾನು ಯಾವುದರ ಬಗ್ಗೆ ಸುದೀರ್ಘವಾಗಿ ವಿವರಿಸಿರುವೆನೋ, ಅಂಥ ಅಕ್ಷರ ಪರಮಾತ್ಮನಲ್ಲಿಯೇ ಅವ್ಯಕ್ತವು ಓತಪ್ರೋತವಾಗಿದೆ. ಈ ಅಕ್ಷರವೇ ಅವ್ಯಕ್ತದ ಕಾರಣವಾಗಿದೆ; ಮೂಲವೂ ಆಗಿದೆ. ''

ಇಡೀ ವಿಶ್ವವು ಅಕ್ಷರದಲ್ಲಿಯೇ ಓತಪ್ರೋತವಾಗಿದೆ. ಈ ಅಕ್ಷರವೇ ಎಲ್ಲಕ್ಕೂ ಮೂಲವಾಗಿದೆ. ಇದೇ ಎಲ್ಲಕ್ಕೂ ಕಾರಣವಾಗಿದೆ ಎಂಬ ಉಪನಿಷತ್ತಿನ ಕೇಂದ್ರ ಸಂದೇಶವೇ ಯಾಜ್ಞವಲ್ಕ್ಯನ ಈ ಉಪದೇಶವಾಗಿದೆ. ಈ ಹಂತದಲ್ಲಿ ಶ್ರೀ ಶಂಕರಾಚಾರ್ಯರು ಅಕ್ಷರದ ಮಹತ್ವವನ್ನು ಈ ಕೆಳಗಿನ ಸುಂದರ ಮಾತುಗಳಲ್ಲಿ ವಿವರಿಸುತ್ತಾರೆ:

''ಯಾವುದು ಸಾಕ್ಷಾತ್ ಅಪರೋಕ್ಷವಾಗಿರುವುದೋ, ಯಾವುದು ಸರ್ವಾಂತರವಾದ ಆತ್ಮವೋ, ಹಸಿವು, ಮುಪ್ಪು ಮುಂತಾದ ಸಂಸಾರಧರ್ಮಗಳನ್ನು ಮೀರಿರುವುದೋ, ಯಾವುದರಲ್ಲಿ ಆಕಾಶವು (ಅವ್ಯಕ್ತ) ಓತಪ್ರೋತವಾಗಿರುವುದೋ, ಇದೇ ಅಂತಿಮ ಗತಿಯು. ಇದೇ ಪರಬ್ರಹ್ಮ. ಇದೇ ಇಡೀ ವಿಶ್ವದ ಅಂದರೆ, ಪೃಥಿವಿಯಿಂದ ಮೊದಲಾಗಿ ಆಕಾಶ (ಅವ್ಯಕ್ತ) — ಇವೆಲ್ಲದರ ಸತ್ಯದ ಸತ್ಯವೇ ಇದಾಗಿದೆ.

ನಂತರ ಗಾರ್ಗಿಯು ಸಭಾಸದರ ಮುಂದೆ ನಿಂತು ಕೈಮುಗಿದುಕೊಂಡು ಹೀಗೆ ಹೇಳಿದಳು: ''ಭಗವಂತರಾದ ಬ್ರಾಹ್ಮಣರೇ, ನನ್ನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಯಾಜ್ಞವಲ್ಕ್ಯನು ನೀಡಿದ್ದಾನೆ. ನೀವು ಇನ್ನುಮುಂದೆ ಅವನ ಮುಂದೆ ವಾದ ಮಾಡಲಾರಿರಿ. ನೀವು ಇಷ್ಟು ಮಾಡಬಹುದಷ್ಟೇ. ನೀವು ಅವನಿಗೆ ನಮಸ್ಕಾರ ಮಾಡಿ, ಅವನು ಒಪ್ಪುವುದಾದರೆ ವಾಗ್ವಿವಾದದಿಂದ ಬಿಡುಗಡೆಯನ್ನು ಪಡೆಯಿರಿ. ಇದಿಷ್ಟೇ ನೀವು ಮಾಡಲು ಸಾಧ್ಯ. ಇಷ್ಟು ಮಾಡಬಲ್ಲಿರಾದರೆ, ಅದೇ ನಿಮ್ಮ ದೊಡ್ಡ ಸಾಧನೆ ಎಂದು ತಿಳಿಯಿರಿ. ಬ್ರಹ್ಮವಾದದ ವಿಷಯಕ್ಕೆ ಬಂದರೆ, ನಿಮ್ಮಲ್ಲಿ ಯಾರೊಬ್ಬನೂ ಎಂದಿಗೂ ಇವನನ್ನು ಜಯಿಸಲಾರನು.''

ಇಷ್ಟು ಹೇಳಿ ಗಾರ್ಗಿಯು ಸುಮ್ಮನಾದಳು. ಗಾರ್ಗಿಯು ಇಷ್ಟು ಹೇಳಿದರೂ, ವಿದ್ವಾಂಸರ ಆ ಗುಂಪಿನಲ್ಲಿ ಇನ್ನೊಬ್ಬ ಬ್ರಾಹ್ಮಣನು ಎದ್ದುನಿಂತನು. ಅವನ ಹೆಸರು ವಿದಗ್ಧ ಶಾಕಲ್ಯ ಎಂದು. ಅವನು ಪ್ರಶ್ನೆಗಳ ಮಳೆಯನ್ನೇ ಸುರಿಸಿದನು. ಆ ಪ್ರಶ್ನೆಗಳೆಲ್ಲವೂ ವಿವಿಧ ದೇವತೆಗಳ ಮತ್ತು ಉಪಾಸನೆಗಳ ಕುರಿತಾಗಿತ್ತು. ಯಾಜ್ಞವಲ್ಕ್ಯನು ಈ ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರಗಳನ್ನು ನೀಡಿದನು. ಇದನ್ನು ಕೇಳಿಸಿಕೊಂಡ ವಿದಗ್ಧ ಶಾಕಲ್ಯನು ಸುಮ್ಮನಾದನು.

ಈತನನ್ನು ಕೆಣಕುತ್ತ ಯಾಜ್ಞವಲ್ಕ್ಯನು ಹೇಳಿದನು: ''ಎಲವೋ, ನಾನು ಬೆಂಕಿಯಂತೆ ಇರುವವನು. ನೀನು ಇಕ್ಕಳದಂತೆ ಇರುವೆ. ನನ್ನನ್ನು ಕಟ್ಟಿಹಾಕುವುದಕ್ಕೆ ಈ ಬ್ರಾಹ್ಮಣರು ನಿನ್ನನ್ನು ಉಪಯೋಗಿಸಿಕೊಂಡಿದ್ದಾರೆ. ಇದು ನಿನಗೆ ಅರಿವಾಗುತ್ತಿಲ್ಲ.'' ಇದನ್ನು ಕೇಳಿದ ಶಾಕಲ್ಯನು ಕೋಪಗೊಂಡನು. ''ನಿನಗೆ ಯಾವ ಬ್ರಹ್ಮವಿದ್ಯೆ ಕರಗತವಾಗಿದೆ ಎಂಬ ಹಮ್ಮಿನಿಂದ ಹೀಗೆ ಈ ಬ್ರಾಹ್ಮಣರನ್ನು ಕುರಿತು ತಿರಸ್ಕಾರದ ಮಾತನ್ನು ಆಡುತ್ತಿರುವೆ?'' ಎಂದನು.

ಇದಕ್ಕೆ ಉತ್ತರವಾಗಿ ಯಾಜ್ಞವಲ್ಕ್ಯನು ವಿದಗ್ಧ ಶಾಕಲ್ಯನಿಗೆ ಒಂದು ದೊಡ್ಡ ಸವಾಲನ್ನೇ ಹಾಕಿದನು:

''ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ, ಊರ್ಧ್ವ — ಈ ಎಲ್ಲ ಐದು ದಿಕ್ಕುಗಳಲ್ಲಿರುವ ಆದಿತ್ಯನೇ ಮೊದಲಾದ ಎಲ್ಲ ದೇವತೆಗಳಿಗೂ ಹೃದಯವೇ ಪ್ರತಿಷ್ಠೆಯಾಗಿದೆ. ಆಯಾ ದೇವತೆಗಳ ಸಾಕ್ಷಾತ್ಕಾರವನ್ನು ನಾನು ಮಾಡಿಕೊಂಡಿದ್ದೇನೆ. ನಾನೇ ಆ ದೇವತೆ ಎಂಬ ಉಪಾಸನೆಯನ್ನು ಮಾಡಿದ ಮೇಲೆ ಬರುವ ಸಾಕ್ಷಾತ್ಕಾರವು ನನಗೆ ತಿಳಿವಾಗಿ ಆಗಿದೆ. ಅಯ್ಯಾ, ಹೃದಯವು ಶರೀರದಲ್ಲಿ ಪ್ರತಿಷ್ಠಿತವಾಗಿದೆ. ಶರೀರವು ಪ್ರಾಣದಲ್ಲಿ ಪ್ರತಿಷ್ಠಿತವಾಗಿದೆ. ಹೀಗೆ ಒಂದರ ಪ್ರತಿಷ್ಠೆಯು ಇನ್ನೊಂದು'' ಎಂದು ಹೇಳುತ್ತ, ಯಾಜ್ಞವಲ್ಕ್ಯನು ಎಲ್ಲಕ್ಕೂ ಆಧಾರಭೂತವಾದ ಪರಮಾತ್ಮನ ಇರುವಿಕೆಯನ್ನು ಹೀಗೆ ಸೂಚಿಸುತ್ತಾನೆ:

**''ಸ ಏಷ ನೇತಿ ನೇತಿ ಇತಿ ಆತ್ಮಾ, ಅಗೃಹ್ಯೋ ನ ಹಿ ಗೃಹ್ಯತೇ, ಅಶೀರ್ಯೋ ನ ಹಿ ಶೀರ್ಯತೇ ಅಸಂಗೋ ನ ಹಿ ಸಜ್ಯತೇ, ಅಸಿತೋ ನ ವ್ಯಥತೇ ನ ರಿಷ್ಯತಿ** – ಇವನೇ ನೇತಿ (ಇದಲ್ಲ), ನೇತಿ (ಇದಲ್ಲ) ಎಂಬ ಆತ್ಮನು. ಇವನನ್ನು ಹಿಡಿಯಲಾಗದಷ್ಟೇ, ಹೀಗಾಗಿ ಅವನು ಅಗ್ರಾಹ್ಯನು. ಇವನು ಸವೆಯುವುದಿಲ್ಲವಷ್ಟೇ, ಹೀಗಾಗಿ ಇವನಿಗೆ ಸವೆಯುವಿಕೆಯೇ ಇಲ್ಲ. ಇವನು ಅಂಟಿಕೊಳ್ಳುವುದಿಲ್ಲವಷ್ಟೇ, ಹೀಗಾಗಿ ಅವನು ಅಸಂಗನು. ಇವನಿಗೆ ಯಾವ ಬಂಧನವೂ ಇಲ್ಲ, ವ್ಯಥೆಯೂ ಇಲ್ಲ, ಇವನು ಹಿಂಸೆಗೆ ಒಳಪಡುವುದೂ ಇಲ್ಲ.

‘‘ಇವನು ಎಲ್ಲ ಲೋಕಗಳನ್ನೂ ಮೀರಿದ್ದಾನೆ; ಎಲ್ಲ ದೇವತೆಗಳನ್ನೂ ಮೀರಿದ್ದಾನೆ. ಎಲ್ಲವನ್ನೂ ಅವನು ತನ್ನೊಳಗೆ ಅಡಗಿಸಿಕೊಳ್ಳುತ್ತಾನೆ. ಅದೇ ಸಮಯದಲ್ಲಿ ಅವನು ಎಲ್ಲವನ್ನೂ ಮೀರಿರುವ ಸ್ವರೂಪದವನು. ಇವನೇ ಉಪನಿಷತ್ತುಗಳು ಉಪದೇಶ ಮಾಡುವ ಔಪನಿಷದಪುರುಷನು.

‘‘ಇಂಥ ಔಪನಿಷದ ಪುರುಷನು ಯಾರು ಎನ್ನುವುದು ನಿನಗೆ ಗೊತ್ತೆ? ಹೇಳು, ನೋಡೋಣ. ಅವನ ಬಗ್ಗೆ ನೀನು ನನಗೆ ವಿವರಿಸಲು ಸಾಧ್ಯವಾಗದೆ ಹೋದರೆ, ನಿನ್ನ ತಲೆಯು ಬಿದ್ದು ಹೋಗಲಿ.’’

ಯಾಜ್ಞವಲ್ಕ್ಯನ ಕೋಪದ ಈ ಮಾತುಗಳನ್ನು ಕೇಳಿದ ಶಾಕಲ್ಯನ ತಲೆಯು ಬಿದ್ದೇ ಹೋಯಿತಂತೆ. ಏಕೆಂದರೆ ಅವನು ಯಾಜ್ಞವಲ್ಕ್ಯನು ಪ್ರಶ್ನಿಸಿದ ಔಪನಿಷದ ಪುರುಷನನ್ನು ಸ್ವಲ್ಪವೂ ಅರಿತಿರಲಿಲ್ಲ. ಯಾಜ್ಞವಲ್ಕ್ಯನಂಥ ಬ್ರಹ್ಮಜ್ಞಾನಿಯ ತಿರಸ್ಕಾರಕ್ಕೆ ಅವನು ತುತ್ತಾದನು. ಹೀಗಾಗಿ ಅವನಿಗೆ ಅಂತ್ಯಸಂಸ್ಕಾರ ಕೂಡ ಆಗಲಿಲ್ಲ. ಏಕೆಂದರೆ ಅವನ ಅಸ್ಥಿಗಳನ್ನು ಯಾರೋ ಕಳ್ಳರು ಅಪಹರಿಸಿಬಿಟ್ಟರು. ಎಂಥ ದುರ್ದೈವ ಅವನದು.

ಇಷ್ಟಾದ ಬಳಿಕ ಉಳಿದ ಬ್ರಾಹ್ಮಣರನ್ನು ಕುರಿತು ಯಾಜ್ಞವಲ್ಕ್ಯನು ಹೀಗೆ ಹೇಳಿದನು: ‘‘ನಿಮ್ಮಲ್ಲಿ ಯಾರಾದರೂ ಒಬ್ಬನು ಮುಂದೆ ಬಂದು ನನ್ನನ್ನು ಪ್ರಶ್ನೆ ಮಾಡಿರಿ. ಇಲ್ಲವೇ ಎಲ್ಲರೂ ಒಟ್ಟಿಗೆ ಸೇರಿಯೇ ಬಂದು ನನ್ನನ್ನು ಪ್ರಶ್ನಿಸಿರಿ. ಇದಾಗದಿದ್ದರೆ ನಿಮ್ಮಲ್ಲಿ ಯಾರಾದರೂ ಒಬ್ಬರು ಮುಂದೆ ಬಂದರೂ ಅವರನ್ನು ನಾನು ಪ್ರಶ್ನಿಸುತ್ತೇನೆ. ಇಲ್ಲವೇ ಒಟ್ಟಾರೆ ನೀವೆಲ್ಲ ಬಂದರೂ ಪ್ರಶ್ನೆ ಹಾಕುತ್ತೇನೆ. ಸರಿಯೆ?’’ ಎಂದು ಗುಡುಗಿದನು. ಇದನ್ನು ಕೇಳಿ ಅಲ್ಲಿ ನೆರೆದಿದ್ದ ಬ್ರಾಹ್ಮಣರು ಭಯದಿಂದ ತತ್ತರಿಸಿಹೋದರು. ಅವರ ಎದೆಗೆಟ್ಟಿತು.

ಕಡೆಗೆ ಯಾಜ್ಞವಲ್ಕ್ಯನೇ ಒಟ್ಟಾರೆ ಅವರೆಲ್ಲರಿಗೂ ಸವಾಲು ಮಾಡುವಂತೆ ಒಂದು ಪ್ರಶ್ನೆಯನ್ನು ಕೇಳಿದನು: ‘‘ಮನುಷ್ಯನನ್ನು ಒಂದು ಮರಕ್ಕೆ ಹೋಲಿಸಬಹುದು. ಅದಕ್ಕೆ ಎಲೆಗಳು, ಮೇಲುಹೊದಿಕೆ, ನಾರು, ಒಳಗಿನ ರಸ, ಕಟ್ಟಿಗೆಯ ಭಾಗ – ಇವೆಲ್ಲವೂ ಇರುತ್ತವೆ. ಇದೇ ರೀತಿ ಮನುಷ್ಯನಿಗೂ ಕೂಡ ಚರ್ಮ, ರಕ್ತ, ಮಾಂಸ, ನರಗಳು, ಅಸ್ಥಿ, ಮಜ್ಜೆ – ಮುಂತಾದ ಅಂಗಗಳು ಇರುತ್ತವೆ. ಮರವನ್ನು ಕಡಿದುಹಾಕಿದರೂ ಅದು ಚಿಗುರುವುದುಂಟು. ಇಲ್ಲವಾದರೆ ಅದು ಉತ್ಪನ್ನಮಾಡಿದ ಬೀಜವೇ ಇನ್ನೊಂದು ಮರವಾಗಿ ಬೆಳೆಯುತ್ತದೆ. ಇದೇ ರೀತಿ ಮನುಷ್ಯನು ಕೂಡ ಸತ್ತಬಳಿಕ ಮತ್ತೆ ಹುಟ್ಟುತ್ತಾನೆ. ಇದಕ್ಕೆ ಕಾರಣವಾದ ಮೂಲ ಅದಾವುದು ನಿಮಗೆ ಗೊತ್ತೆ?’’

ಅಲ್ಲಿ ನೆರೆದಿದ್ದ ಯಾವ ಬ್ರಾಹ್ಮಣರಿಗೂ ಈ ಮೂಲತತ್ತ್ವದ ಬಗ್ಗೆ ಗೊತ್ತಿರಲಿಲ್ಲ. ಹೀಗೆ ಎಲ್ಲ ಬ್ರಾಹ್ಮಣರನ್ನೂ ಯಾಜ್ಞವಲ್ಕ್ಯನೇ ಏಕಾಂಗಿಯಾಗಿ ಜಯಿಸಿದನು. ಬ್ರಹ್ಮವೇತ್ತನಿಗೆ ಜನಕಮಹಾರಾಜನು ತೆಗೆದಿರಿಸಿದ್ದ ಗೋವುಗಳನ್ನು ತನ್ನ ಶಿಷ್ಯನು ಅಟ್ಟಿಕೊಂಡು ಹೋಗಿದ್ದನ್ನು ಸಮರ್ಥಿಸಿಕೊಂಡನು.

ಈ ಜಗನ್ಮೂಲವನ್ನು ಉಪನಿಷತ್ತು ಹೀಗೆ ವರ್ಣಿಸುತ್ತದೆ : ವಿಜ್ಞಾನಮಾನಂದಮ್ ಬ್ರಹ್ಮ ಎಂದು. ವಿಜ್ಞಾನಮಾನಂದ ಎನ್ನುವುದನ್ನು ಶ್ರೀಶಂಕರಾಚಾರ್ಯರು ಹೀಗೆ ಸೊಗಸಾಗಿ ವರ್ಣಿಸುತ್ತಾರೆ: ‘‘ವಿಜ್ಞಾನ ಎಂದರೆ ವಿಜ್ಞಪ್ತಿ ಎಂದು. ಅಂದರೆ ಪರಿಶುದ್ಧವಾದ ಅರಿವು ಇದು. ಇದು ಕೂಟಸ್ಥವಾದ ಚೈತನ್ಯವೇ ಆಗಿದೆ. ಇದು ವಿಷಯವಸ್ತುಗಳ ಅನುಭವದಿಂದ ಉಂಟಾಗುವ ಆನಂದವಲ್ಲ. ಅಂಥ ವಿಷಯಾನಂದವು ದುಃಖರೂಪವಾದದ್ದು. ಈ ಜ್ಞಾನವಾದರೋ ಪರಿಶುದ್ಧ ಆನಂದರೂಪದ ಅರಿವು. ಇಲ್ಲಿ ಅರಿವು ಬೇರೆಯಲ್ಲ; ಆನಂದ ಬೇರೆಯಲ್ಲ. ಇದು ಪ್ರಸನ್ನವಾದುದು, ಮಂಗಳಕರವಾದುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲ. ಇದರಲ್ಲಿ ವಿಷಯವಸ್ತುಗಳ ಅನುಭವದಿಂದ ಉಂಟಾಗುವ ದುಃಖರೂಪವಾದ ಆಯಾಸವೇ ಇಲ್ಲ. ಇದು ನಿತ್ಯತೃಪ್ತವಾದ, ಯಾವತ್ತೂ ಒಂದೇ ಆಗಿ ನಿತ್ಯನಿರಂತರವಾಗಿ ಹರಿಯುವ ಆನಂದ. ಇದು ಎಲ್ಲರಿಗೂ ಕೊನೆಯ ಗತಿಯಾಗಿದೆ. ಬ್ರಹ್ಮಜ್ಞಾನಿಯ ಸಹಜ ಸ್ಥಿತಿಯೇ ಇದು.’’

## ವಿದ್ಯೆ ಮತ್ತು ಸೌಂದರ್ಯ

ಒಂದು ಸಲ ಚಂದ್ರಗುಪ್ತನು ಚಾಣಕ್ಯನಿಗೆ ಹೇಳಿದ: ‘‘ನಿಮ್ಮ ಪಾಂಡಿತ್ಯ, ತಿಳಿವಳಿಕೆ ಹಾಗೂ ಚಾತುರ್ಯ ಇವನ್ನೆಲ್ಲ ನಾನು ಮೆಚ್ಚಿಕೊಳ್ಳುತ್ತೇನೆ. ಅದರೊಂದಿಗೆ ನಿಮಗೆ ದೇವರು ಸುಂದರವಾದ ರೂಪವನ್ನೂ ಕೊಟ್ಟಿದ್ದರೆ!’’

ಚಂದ್ರಗುಪ್ತನಿಗೆ ತನ್ನ ಸೌಂದರ್ಯದ ಮೇಲೆ ತುಂಬಾ ಅಭಿಮಾನವಿದೆಯೆಂದೂ, ಅವನು ಅದರ ಮುಂದೆ ವಿದ್ಯೆಗೆ ಮಹತ್ವ ನೀಡಿಲ್ಲವೆಂದೂ ಚಾಣಕ್ಯನಿಗೆ ಅರ್ಥವಾಯಿತು. ಅವನು ಕೂಡಲೇ ಸೇವಕನಿಗೆ ಹೇಳಿದ, ‘‘ಒಂದು ಚಿನ್ನದ ಪಾತ್ರೆಯಲ್ಲಿ ಹಾಗೂ ಇನ್ನೊಂದು ಮಣ್ಣಿನ ಪಾತ್ರೆಯಲ್ಲಿ ನೀರು ತುಂಬಿ, ತಗೆದುಕೊಂಡು ಬಾ’’ ಸೇವಕ ಹಾಗೆಯೇ ಮಾಡಿದ. ಚಾಣಕ್ಯ ಮೊದಲು ಮಣ್ಣಿನ ಪಾತ್ರೆಯಲ್ಲಿದ್ದ ನೀರನ್ನು ರಾಜನಿಗೆ ಕುಡಿಯಲು ಕೊಟ್ಟ; ಬಳಿಕ ಚಿನ್ನದ ಪಾತ್ರೆಯಲ್ಲಿದ್ದ ನೀರನ್ನು ಕುಡಿಯಲು ಹೇಳಿದ. ಈಗ ರಾಜನನ್ನು ಪ್ರಶ್ನಿಸಿದ: ‘‘ರಾಜ, ಯಾವ ಪಾತ್ರೆಯ ನೀರು ತಣ್ಣಗಿತ್ತು ?’’ ರಾಜ ಉತ್ತರಿಸಿದ : ‘‘ಮಣ್ಣಿನ ಪಾತ್ರೆಯದು.’’

ಆಗ ಚಾಣಕ್ಯ ಹೇಳಿದ : ‘‘ಎರಡೂ ಪಾತ್ರೆಗಳಲ್ಲಿ ತಣ್ಣೀರನ್ನೇ ತುಂಬಿದ್ದರೂ, ಹೊರಗಿನಿಂದ ಬೆಳಗುವ ಚಿನ್ನದ ಪಾತ್ರೆಯಲ್ಲಿದ್ದ ನೀರು ತಣ್ಣಗಿರಲಿಲ್ಲ. ಮಣ್ಣಿನ ಪಾತ್ರೆಯ ನೀರೇ ತಣ್ಣಗಿತ್ತಲ್ಲವೆ? ಅದೇ ರೀತಿ, ಸೌಂದರ್ಯ ಮತ್ತು ವಿದ್ಯೆ ಕೂಡ. ಸೌಂದರ್ಯ ಮತ್ತು ಕುರೂಪ ಇವಕ್ಕೂ ವಿದ್ಯೆಗೂ ಸಂಬಂಧವಿಲ್ಲ. ಆದರೆ ಸೌಂದರ್ಯಕ್ಕಿಂತ ವಿದ್ಯೆಯೇ ಶ್ರೇಷ್ಠ.’’